ಪತ್ರಿಕಾ ಪ್ರಕಟಣೆ

ದಿನಾಂಕ: 14ನೇ ಅಕ್ಟೋಬರ್ 2026

ಸೆಪ್ಟೆಂಬರ್ 30, 2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅವಧಿಯ ಆರ್ಥಿಕ ಫಲಿತಾಂಶಗಳು

ಜಾಗತಿಕ ವ್ಯವಹಾರದಲ್ಲಿ ವರ್ಷದಿಂದ ವರ್ಷಕ್ಕೆ 15.88% ಬೆಳವಣಿಗೆ

ಜಾಗತಿಕ ಠೇವಣಿಯಲ್ಲಿ ವರ್ಷದಿಂದ ವರ್ಷಕ್ಕೆ 13.13% ಬೆಳವಣಿಗೆ

ಜಾಗತಿಕ ಮುಂಗಡಗಳು ವರ್ಷದಿಂದ ವರ್ಷಕ್ಕೆ 19.46% ಬೆಳವಣಿಗೆ

ನಿವ್ವಳ ಲಾಭದಲ್ಲಿ ವರ್ಷದಿಂದ ವರ್ಷಕ್ಕೆ 8.40% ಬೆಳವಣಿಗೆ

ಪ್ರಮುಖ ಮುಖ್ಯಾಂಶಗಳು
(ಸೆಪ್ಟೆಂಬರ್ 2025 ಮತ್ತು ಸೆಪ್ಟೆಂಬರ್ 2026ರ ಹೋಲಿಕೆ)

- ಜಾಗತಿಕ ವ್ಯವಹಾರದಲ್ಲಿ 15.88%ರಷ್ಟು ಬೆಳವಣಿಗೆಯೊಂದಿಗೆ ₹30,72,365 ಕೋಟಿ ತಲುಪಿದೆ.
- ಜಾಗತಿಕ ಠೇವಣಿಯಲ್ಲಿ 13.13%ರಷ್ಟು ಬೆಳವಣಿಗೆಯೊಂದಿಗೆ ₹16,97,305 ಕೋಟಿ ತಲುಪಿದೆ.
- ಜಾಗತಿಕ ಮುಂಗಡದಲ್ಲಿ 19.46%ರಷ್ಟು ಬೆಳವಣಿಗೆಯೊಂದಿಗೆ ₹13,75,060 ಕೋಟಿ ತಲುಪಿದೆ.
- ರಿಟೇಲ್-ಕೃಷಿ-ಎಂಎಸ್ಎಂಇ ಕ್ಷೇತ್ರಗಳಿಗೆ ನೀಡಲಾದ ಸಾಲಗಳಲ್ಲಿ 21.03% ರಷ್ಟು ಬೆಳವಣಿಗೆ.
- ರಿಟೇಲ್ ಸಾಲಗಳಲ್ಲಿ 31.61%ರಷ್ಟು ಬೆಳವಣಿಗೆಯಾಗಿದೆ. ಗೃಹ ಸಾಲಗಳಲ್ಲಿ 17.35%ರಷ್ಟು ಬೆಳವಣಿಗೆ ಮತ್ತು ವಾಹನ ಸಾಲಗಳಲ್ಲಿ 25.50%ರಷ್ಟು ಬೆಳವಣಿಗೆಯಾಗಿದೆ.
- ಕಾರ್ಯಾಚರಣೆ ಲಾಭವು ₹ 8,758 ಕೋಟಿಯಾಗಿದ್ದು, 1.98% ರಷ್ಟು ಬೆಳವಣಿಗೆಯಾಗಿದೆ
- ನಿವ್ವಳ ಲಾಭ 8.40%ರಷ್ಟು ಬೆಳವಣಿಗೆಯೊಂದಿಗೆ ₹5,175 ಕೋಟಿ ತಲುಪಿದೆ.
- ಪ್ರಾವಿಷನ್ ಕವರೇಜ್ ಅನುಪಾತ (ಪಿಸಿಆರ್) 175 ಬಿಪಿಎಸ್ ಬೆಳವಣಿಗೆಯೊಂದಿಗೆ 95.34%ರಷ್ಟು ತಲುಪಿದೆ
- ಪ್ರತಿ ಷೇರಿನ ಗಳಿಕೆಯು 5% ಹೆಚ್ಚಳದೊಂದಿಗೆ ₹22.06ಕ್ಕೆ ತಲುಪಿದ
- ಒಟ್ಟು ನಿಷ್ಕ್ರಿಯ ಆಸ್ತಿಗಳು ಅನುಪಾತ 1.33% ರಷ್ಟಿದ್ದು 102 ಬಿಪಿಎಸ್ ನ ಸುಧಾರಣೆ ಕಂಡಿದೆ
- ನಿವ್ವಳ ನಿಷ್ಕ್ರಿಯ ಆಸ್ತಿಗಳು ಅನುಪಾತ 0.30% ರಷ್ಟಿದ್ದು 24 ಬಿಪಿಎಸ್ ರಷ್ಟು ಉತ್ತಮಗೊಂಡಿದೆ
- ಮುಂಗಡಗಳ ವೆಚ್ಚ 0.47%ರಷ್ಟಿದ್ದು 21 ಬಿಪಿಎಸ್ ನ ಪ್ರಗತಿ ದಾಖಲಿಸಿದೆ
- ಜಾರಿಕೆ/ಕುಸಿತದ ಅನುಪಾತ 0.58% ರಷ್ಟಿದ್ದು 18 ಬಿಪಿಎಸ್ ನಷ್ಟು ಉತ್ತಮಗೊಂಡಿದೆ

1 Bank Number 1800 1030 24/7 365 Days IN 12 LANGUAGES

Canara HEAL HEALTHCARE LOAN

Internal

30.09.2026 ರಲ್ಲಿನ ವ್ಯವಹಾರಗಳ ಪ್ರಮುಖ ಕಾರ್ಯಕ್ಷಮತೆ ಸಾರಾಂಶಗಳು

ವ್ಯವಹಾರಗಳು

- ಸೆಪ್ಟೆಂಬರ್ 2026ರಲ್ಲಿ, ಒಟ್ಟಾರೆ ಜಾಗತಿಕ ವ್ಯವಹಾರದಲ್ಲಿ ವರ್ಷದಿಂದ ವರ್ಷಕ್ಕೆ 15.88%ರಷ್ಟು ಬೆಳವಣಿಗೆಯೊಂದಿಗೆ ₹30,72,365 ಕೋಟಿ ತಲುಪಿದೆ. ಒಟ್ಟಾರೆ ಜಾಗತಿಕ ಠೇವಣಿಯಲ್ಲಿ ವರ್ಷದಿಂದ ವರ್ಷಕ್ಕೆ 13.13%ರಷ್ಟು ಬೆಳವಣಿಗೆಯೊಂದಿಗೆ ₹16,97,305 ಕೋಟಿ ತಲುಪಿದೆ. ಒಟ್ಟಾರೆ ಜಾಗತಿಕ ಮುಂಗಡದಲ್ಲಿ ವರ್ಷದಿಂದ ವರ್ಷಕ್ಕೆ 19.46% ರಷ್ಟು ಬೆಳವಣಿಗೆಯೊಂದಿಗೆ ₹13,75,060 ಕೋಟಿ ತಲುಪಿದೆ.
- ಸೆಪ್ಟೆಂಬರ್ 2026ರಲ್ಲಿ, ದೇಶೀಯ ಠೇವಣಿಯಲ್ಲಿ ವರ್ಷದಿಂದ ವರ್ಷಕ್ಕೆ 10.97%ರಷ್ಟು ಬೆಳವಣಿಗೆಯೊಂದಿಗೆ ₹15,47,979 ಕೋಟಿ ತಲುಪಿದೆ.
- ಸೆಪ್ಟೆಂಬರ್ 2026ರಲ್ಲಿ, ದೇಶೀಯ ಮುಂಗಡದಲ್ಲಿ ವರ್ಷದಿಂದ ವರ್ಷಕ್ಕೆ 16.95%ರಷ್ಟು ಬೆಳವಣಿಗೆಯೊಂದಿಗೆ ₹12,64,753 ಕೋಟಿ ತಲುಪಿದೆ.
- ರಿಟೇಲ್-ಕೃಷಿ-ಎಂಎಸ್‌ಎಂಇ ಸಾಲಗಳಲ್ಲಿ ವರ್ಷದಿಂದ ವರ್ಷಕ್ಕೆ 21.03%ರಷ್ಟು ಬೆಳವಣಿಯೊಂದಿಗೆ ₹8,12,310 ಕೋಟಿ ತಲುಪಿದೆ.
- ರಿಟೇಲ್ ಸಾಲಗಳಲ್ಲಿ ವರ್ಷದಿಂದ ವರ್ಷಕ್ಕೆ 31.61% ರಷ್ಟು ಬೆಳವಣಿಗೆಯೊಂದಿಗೆ ₹3,30,587 ಕೋಟಿ ತಲುಪಿದೆ.
- ಗೃಹಸಾಲಗಳಲ್ಲಿ ವರ್ಷದಿಂದ ವರ್ಷಕ್ಕೆ 17.35% ರಷ್ಟು ಬೆಳವಣಿಗೆಯೊಂದಿಗೆ ₹1,34,501 ಕೋಟಿ ತಲುಪಿದೆ.

ಆಸ್ತಿ ಗುಣಮಟ್ಟ

- ಒಟ್ಟು ನಿಷ್ಕ್ರಿಯ ಆಸ್ತಿಗಳು ಅನುಪಾತ ಇಳಿಕೆಯೊಂದಿಗೆ ಸೆಪ್ಟೆಂಬರ್ 2026 ಕ್ಕೆ 1.33% ರಷ್ಟಿದ್ದು, ಇದು ಜೂನ್ 2026 ಗೆ 1.57% ಹಾಗೂ ಸೆಪ್ಟೆಂಬರ್ 2025 ಗೆ 2.35% ರಷ್ಟಿತ್ತು
- ನಿವ್ವಳ ನಿಷ್ಕ್ರಿಯ ಆಸ್ತಿಗಳು ಅನುಪಾತ ಸೆಪ್ಟೆಂಬರ್ 2026 ಕ್ಕೆ 0.30% ಕ್ಕೆ ಉತ್ತಮಗೊಂಡಿದೆ. ಇದು ಜೂನ್ 2026 ಕ್ಕೆ 0.36% ಹಾಗೂ ಸೆಪ್ಟೆಂಬರ್ 2025ಕ್ಕೆ 0.54% ರಷ್ಟಿತ್ತು.
- ಪ್ರಾವಿಷನ್ ಕವರೇಜ್ ಅನುಪಾತ (ಪಿಸಿಆರ್), ಸೆಪ್ಟೆಂಬರ್ 2026 ಕ್ಕೆ 95.34% ರಷ್ಟಿದ್ದು ಇದು ಜೂನ್ 2026 ಕ್ಕೆ 94.76% ಹಾಗೂ ಸೆಪ್ಟೆಂಬರ್ 2025 ಕ್ಕೆ 93.59% ರಷ್ಟಿತ್ತು.

ಬಂಡವಾಳ ಪರ್ಯಾಪ್ತತೆ ಅನುಪಾತ

- ಸಿ ಆರ್ ಎ ಅರ್ ಅನುಪಾತ ಸೆಪ್ಟೆಂಬರ್ 2026ರಲ್ಲಿ 17.19% ಆಗಿರುತ್ತದೆ. ಇದರಲ್ಲಿ ಸಿ ಇ ಟಿ 1 ಅನುಪಾತ 12.80% ,ಮೊದಲನೇ ಶ್ರೇಣಿಯ ಅನುಪಾತ 2.25%, ಮತ್ತು ಎರಡನೇ ಶ್ರೇಣಿಯ ಅನುಪಾತ 2.14% ಆಗಿರುತ್ತದೆ.

ಆದ್ಯತಾ ಕ್ಷೇತ್ರಗಳು ಮತ್ತು ಆರ್ಥಿಕ ಸೇರ್ಪಡೆ

- ಬ್ಯಾಂಕ್ ಸೆಪ್ಟೆಂಬರ್ 2026 ಆದ್ಯತಾ ಕ್ಷೇತ್ರ ಮತ್ತು ಕೃಷಿ ಸಾಲಗಳ ಗುರಿಯನ್ನು ಸಾಧಿಸಿದೆ. ಈ ಸಾಲಿನಲ್ಲಿ ಆದ್ಯತಾ ಕ್ಷೇತ್ರ ಮತ್ತು ಕೃಷಿ ಸಾಲಗಳು, ಎ ಎನ್ ಬಿ ಸಿ ಯ ಅನುಪಾತಗಳು ಅನುಕ್ರಮವಾಗಿ 44.99% (ಅವಶ್ಯಕ ಅನುಪಾತ 40%) ಮತ್ತು 20.61% (ಅವಶ್ಯಕ ಅನುಪಾತ 18%) ಆಗಿರುತ್ತದೆ.
- ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡಲಾದ ಸಾಲ ಎ ಎನ್ ಬಿ ಸಿ ಯ ಅನುಪಾತ 12.74% ಆಗಿರುತ್ತದೆ. (ಅವಶ್ಯಕ ಅನುಪಾತ ಎ ಎನ್ ಬಿ ಸಿ ಯ 10%).
- ದುರ್ಬಲ ವರ್ಗಗಳಿಗೆ ನೀಡಲಾದ ಸಾಲ ಎ ಎನ್ ಬಿ ಸಿ ಯ ಅನುಪಾತ 18.73% ಆಗಿರುತ್ತದೆ. (ಅವಶ್ಯಕ ಅನುಪಾತ ಎ ಎನ್ ಬಿ ಸಿ ಯ 12%).
- ಸೂಕ್ಷ್ಮ ಉದ್ಯಮಿಗಳಿಗೆ ನೀಡಲಾದ ಸಾಲ ಎ ಎನ್ ಬಿ ಸಿ ಯ ಅನುಪಾತ 9.22% ಆಗಿರುತ್ತದೆ. (ಅವಶ್ಯಕ ಅನುಪಾತ ಎ ಎನ್ ಬಿ ಸಿ ಯ 7.50%).
- ವ್ಯವಸಾಯಕ್ಕಾಗಿ ರೈತರಿಗೆ ನೀಡಲಾದ ವೈಯಕ್ತಿಕ ಸಾಲ ಎ ಎನ್ ಬಿ ಸಿ ಯ ಅನುಪಾತ 15.55% ಆಗಿರುತ್ತದೆ. (ಅವಶ್ಯಕ ಅನುಪಾತ ಎ ಎನ್ ಬಿ ಸಿ ಯ 14.00%).

ಶಾಖೆಗಳು ಮತ್ತು ಎ ಟಿ ಎಮ್ ಗಳು

- 30.09.2026ಕ್ಕೆ ಬ್ಯಾಂಕ್ ಒಟ್ಟು 10146 ದೇಶೀಯ ಶಾಖೆಗಳನ್ನು ಹೊಂದಿದೆ. ಇವುಗಳಲ್ಲಿ 3215 ಗ್ರಾಮೀಣ ಪ್ರದೇಶ, 3040 ಅರೆ ನಗರ ಪ್ರದೇಶ, 1994 ನಗರ ಪ್ರದೇಶ ಮತ್ತು 1897 ಮಹಾ ನಗರ ಪ್ರದೇಶಗಳಲ್ಲಿ ಇವೆ ಹಾಗೂ ಒಟ್ಟು 10764 ಎ ಟಿ ಎಂ ಮತ್ತು ರೀಸೈಕ್ಲರ್‌ಗಳನ್ನು ಹೊಂದಿದೆ. ಅಲ್ಲದೆ, ಲಂಡನ್, ದುಬೈ, ನ್ಯೂಯಾರ್ಕ್ ಮತ್ತು ಐಬಿಯು ಗಿಫ್ಟ್ ಸಿಟಿ ಗುಜರಾತ್‌ನಲ್ಲಿ ಸೇರಿ 4 ಅಂತಾರಾಷ್ಟ್ರೀಯ ಶಾಖೆಗಳನ್ನು ಹೊಂದಿದೆ.

1 Bank Number 1800 1030 24/7 365 Days IN 12 LANGUAGES